ಬಾಗಿಲಿಗೆ ಒರಗಿ ಕುಳಿತಿದ್ದ ಅವಳ ಅತ್ತೆ ರೇಗಿದಳು.

"ನೀನಿನ್ನೂ ಚಿಕ್ಕವಳು... ನಿನಗಿನ್ನೂ ಭವಿಷ್ಯವಿದೆ. ನೀನೂ ಮೂಲೆ ಸೇರ್ಕೊಂಡ್ರೆ ನಮ್ಮನ್ನ ನೋಡ್ಕೊಳ್ಳೋರು ಯಾರವ್ವ? ನಿಂಗೇನಾದ್ರೂ ಬುದ್ಧಿಗಿದ್ಧಿ ಇದ್ಯಾ?..'' ಮಾವ ಗಂಗಪ್ಪ ಕವಕವ ಕೆಮ್ಮುತ್ತಲೇ ಹೇಳಿದ.

"ನೀನಾ?'' ಸುಬ್ಬರಾಯ ಮತ್ತೊಮ್ಮೆ ಆಶ್ಚರ್ಯದಿಂದ ಕೇಳಿದ.

"ಯಾಕೆ? ನನ್ನ ಕಿಡ್ನಿ ಉಪಯೋಗಕ್ಕೆ ಬರೋಲ್ವಾ?"

"ಹಾಗಲ್ಲ. ಕೆಲವು ಪರೀಕ್ಷೆಗಳು ಮಾಡ್ಬೇಕಾಗುತ್ತೆ. ಆದಾದಮೇಲೆ ನಿನ್ನ ಕಿಡ್ನಿ ಅವರಿಗೆ ಹೊಂದಿಕೊಳ್ಳುತ್ತೋ ಇಲ್ಲವೋ ಅನ್ನೋದು ಗೊತ್ತಾಗೋದು. ಆಗುತ್ತೆ ಅಂದ್ರೆ ಕೊಡಬಹುದು..."

"ಕಿಡ್ನಿ ಕೊಟ್ರೆ ದುಡ್ಡು ಕೊಡ್ತಾರೆ ತಾನೆ?" ಸಂಶಯದಿಂದಲೇ ಕೇಳಿದಳು ಸತ್ಯವತಿ.

"ಆಗ್ಲೇ ಹೇಳಿದೆನಲ್ಲ... ನಾಲ್ಕೈದು ಲಕ್ಷ ಕೊಡ್ತಾರೆ ಅಂತ."

"ಆರು ಕೊಡ್ಸು ಸುಬ್ಬರಾಯಪ್ಪ... ನನ್ನ ಕಿಡ್ನಿ ಕೊಡ್ತೀನಿ..." ಅಂಗಲಾಚುವಂತೆ ಕೇಳಿದಳು.

ಒಂದು ಕ್ಷಣ ಆಲೋಚಿಸಿದ ಸುಬ್ಬರಾಯ.

"ಆರು ಕೊಡೋದು ಕಾಣೆ. ಆದ್ರೂ ಆರು ಲಕ್ಷ ತಗೊಂಡು ಏನು ಮಾಡ್ತಿ?..." ಕುತೂಹಲದಿಂದ ಕೇಳಿದ.

"ಮಾವಂಗೆ ಚಿಕಿತ್ಸೆ ಕೊಡಿಸ್ಬೇಕು. ಮಕ್ಕಳನ್ನು ಒಳ್ಳೆ ಶಾಲೆಗೆ ಸೇರಿಸಿ ಚೆನ್ನಾಗಿ ಓದಿಸ್ಬೇಕು. ಸಾಹುಕಾರನ ಸಾಲ ತೀರ್ಸಿ ಅವ್ನ ಕೈಯಿಂದ ಮನೆ ಬಿಡಿಸ್ಕೊಬೇಕು. ಚಿಲ್ಲರೆ ಕೈಸಾಲಗಳೆಲ್ಲ ತೀರಿಸ್ಕೊಬೇಕು. ಕಿಡ್ನಿ ಕೊಟ್ಮೇಲೆ ನಾನು ಮೊದಲಿನಂತೆ ಕೂಲಿ ಕೆಲಸಕ್ಕೆ ಹೋಗೋಕೆ ಆಗುತ್ತೋ ಇಲ್ವೋ! ಕೂತು ಸಂಪಾದನೆ ಮಾಡ್ಬೇಕು ಅಂದ್ರೆ ಒಂದು ಕಿರಾಣಿ ಅಂಗ್ಡಿಯೋ, ಟೈಲರಿಂಗ್ ಷಾಪೋ ಹಾಕ್ಕೊಳೋದೋ ಏನೋ ಒಂದು ಮಾಡ್ಕೊಬೇಕಾಗುತ್ತೆ. ಹಿಂಗೆ ಇನ್ನು ಏನೇನೋ..." ಎತ್ತಲೋ ನೋಡುತ್ತ ಹೇಳಿದಳು ಸತ್ಯವತಿ.

"ನೀನು ಹೇಳೋದು ಸರಿ. ನಿನ್ನ ಗಂಡ, ಅತ್ತೆ, ಮಾವ ಅವ್ರ ಜೊತೆ ಕೂತ್ಕೊಂಡು ಚೆನ್ನಾಗಿ ಆಲೋಚ್ನೆ ಮಾಡು. ಐದು ಲಕ್ಷಕ್ಕಂತು ಮೋಸ ಇಲ್ಲ. ಆರು ಕೇಳಿ ನೋಡ್ತೀನಿ... ಎರಡು ದಿನ ಬಿಟ್ಟು ಮತ್ತೆ ಬರ್ತೀನಿ." ಎನ್ನುತ್ತಾ ಮೇಲೆದ್ದ ಸುಬ್ಬರಾಯ.

ಆ ರಾತ್ರಿ ಪೂರ್ತಿ ಆ ಮನೆಯಲ್ಲಿ ಯಾರೂ ಕಣ್ಣು ಮುಚ್ಚಲಿಲ್ಲ. ವೀರಬಾಬು, ಸತ್ಯವತಿ, ಅತ್ತೆ ರತ್ನಮ್ಮ, ಮಾವ ಗಂಗಪ್ಪ ನಾಲ್ವರ ನಡುವೆ ಕಿಡ್ನಿ ದಾನಕೊಡೋ ವಿಷಯದ ಬಗ್ಗೆ ತರ್ಜನೆ ಭರ್ಜನೆ ನಡೆಯಿತು.

"ಸಾಹುಕಾರು ಸುಬ್ಬಯ್ಯನ ಪರವಾಗಿ ಕೋರ್ಟಲ್ಲಿ ಡಿಕ್ರೀ ಆಗಿರೋದ್ರಿಂದ ಇನ್ನು ಸ್ವಲ್ಪ ದಿವಸದಲ್ಲೇ ಚಾಪೆ ಸುತ್ಕೊಂಡು, ಗಂಟುಮೂಟೆ ಕಟ್ಕೊಂಡು ಮಕ್ಳುಮರಿ ಜೊತೆ ಬೀದಿಗೆ ಬೀಳೋ ದಿವ್ಸ ದೂರ ಇಲ್ಲ. ಇಲ್ಲಾ ಎಲ್ರೂ ವಿಷ ತಗೊಂಡು ಸಾಯ್ಬೇಕು. ಅದೂ ಬೇಡ ಅಂದ್ರೆ ಉಳಿದಿರೋದು ಕಿಡ್ನಿ ಮಾರ್ಕೊಳ್ಳೋದೊಂದೇ ದಾರಿ..." ತನ್ನ ಖಚಿತ ನಿರ್ಧಾರವನ್ನು ಮನೆ ಮಂದಿಯ ಮುಂದೆ ಇಟ್ಟಳು.

